ಅ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು?

ಆ) ಈ ಯೋಜನೆಯ ಕಾರ್ಯ ಈವರೆಗೆ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಮತ್ತು ಈ ಯೋಜನೆಯ ಕಾರ್ಯ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಉ) ಈ ಯೋಜನೆ ಪೂರ್ಣಗೊಳ್ಳಲಿಕ್ಕೆ ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಪಿರಿಯಾಪಟ್ಟಣಕ್ಕೆ, ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಗೆ ದಿನಾಂಕ 24.11.98 ರಂದು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದೆ ಮತ್ತು ಕೇಂದ್ರ ಸರ್ಕಾರದಿಂದ ದಿನಾಂಕ 14.1.1999ರ ತಾಂತ್ರಿಕ ಅನುಮೋದನೆ ದೊರೆತಿದೆ.

ಆ) ಈ ಯೋಜನೆಯ ಅಂದಾಜು ವೆಚ್ಚ ರೂ. 480.00 ಲಕ್ಷಗಳು.

ಇ) ಈ ಯೋಜನೆಯಡಿಯಲ್ಲಿ ಮೂಲ ಸ್ಥಾವರದ ಕಾಮಗಾರಿಗಳು ಪೈಪ್‌ಲೈನ್ ಮತ್ತು ಜಲಸಂಗ್ರಹಾರದ ಕಾಮಗಾರಿಗಳು ಡಿಸೆಂಬರ್ 99 ತಿಂಗಳಿನಲ್ಲಿ ಪ್ರಾರಂಭವಾಗಿದೆ.

ಈ) ಉದ್ಭವಿಸುವುದಿಲ್ಲ.

ಉ) ಈ ಯೋಜನೆಯನ್ನು ಮಾರ್ಚ್ 2001ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಯೋಜನೆಗಳು

377 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವ ಯಾವ ಯೋಜನೆಗಳಿವೆ?

ಆ) ಈ ಯೋಜನೆಗಳಿಗೆ 1997-98, 1998-99 ಹಾಗೂ 1999-2000ರಲ್ಲಿ ನಿಗಧಿಗೊಳಿಸಿದ ಮೊತ್ತ ಹಾಗೂ ವೆಚ್ಚ ಮಾಡಿದ ಮೊತ್ತವೆಷ್ಟು?

ಇ) ಈ ಸಮಾಜ ಕಲ್ಯಾಣ ಇಲಾಖೆಯಡಿ ಯಾವ ಯಾವ ವರ್ಗದವರಿಗೆ ಯಾವ ಯಾವ ಕಲ್ಯಾಣ ಕ್ರಮಗಳನ್ನು ಹಾಕಿಕೊಳ್ಳಲಾಗಿದೆ?

ಈ) ಈ ಇಲಾಖೆಯಲ್ಲಿ ಕೈಗೊಂಡ ವಿಶೇಷ ಯೋಜನೆಗಳಾವುವು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯವರ ಅಭ್ಯುದಯಕ್ಕಾಗಿ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಅನುಬಂಧ-1 ಮತ್ತು ಅನುಬಂಧ-2 ಆ ರಲ್ಲಿ ತಿಳಿಸಲಾಗಿದೆ.

ಆ) ಸಮಾಜ ಕಲ್ಯಾಣ ಇಲಾಖೆಯಡಿ 1997-98, 98-99 ಹಾಗೂ 99-2000ದಲ್ಲಿ ನಿಗಧಿಗೊಳಿಸಿದ ಮೊತ್ತ ವೆಚ್ಚ ಮಾಡಿದ ಮೊತ್ತದ ವಿವರ ಕೆಳಗಿನಂತಿದೆ.

(ರೂ. ಕೋಟಿಗಳಲ್ಲಿ)

		ನಿಗಧಿಗೊಳಿಸಿದ ಮೊತ್ತ		ವೆಚ್ಚ ಮಾಡಿದ ಮೊತ್ತ	
		ಯೋಜನೆ	ಯೋಜನೇತರ	ಯೋಜನೆ	ಯೋಜನೇತರ
1.	1997-98	143.53	63.70	120.48	60.59
2.	1998-99	194.80	69.24	175.02	71.65
3.	1999-2000 (ಜನವರಿ ಅಂತ್ಯ ದವರೆಗೆ)	203.37	73.37	56.16	56.70

ಇ) ಸಮಾಜ ಕಲ್ಯಾಣ ಇಲಾಖೆಯಡಿ ಎಲ್ಲಾ ಕಾರ್ಯಕ್ರಮಗಳನ್ನು ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿಯೇ ರೂಪಿಸಿ ಕಾರ್ಯಗತಗೊಳಿಸಲಾಗುತ್ತಿದೆ.

ಈ) ಸಮಾಜ ಕಲ್ಯಾಣ ಇಲಾಖೆಯಿಂದ ಕೈಗೊಂಡ ವಿಶೇಷ ಯೋಜನೆಗಳ ವಿವರವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಬಾಲಕಿಯವರಿಗೆ 500.00 ರೂ.ಗಳ ಪ್ರೋತ್ಸಾಹ ವಿದ್ಯಾರ್ಥಿವೇತನ ಮಂಜೂರಾತಿ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ವಹಣೆ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ರಾಮಕೃಷ್ಣ ಆಶ್ರಮ ಮತ್ತು ಇತರೆ ಹೆಸರಾಂತ ವಿದ್ಯಾ ಸಂಸ್ಥೆಗಳಿಗೆ ಆಯ್ಕೆ ಮಾಡಿ ಕಳುಹಿಸುವುದು, ನವಚೇತನ ಯೋಜನೆಯಡಿ ವಿದ್ಯಾವಂತ ನಿರುದ್ಯೋಗಿ ಯುವಕ:ಯುವತಿಯರಿಗೆ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ಸ್ ಹಾಗೂ ಇತರೆ ಟ್ರೇಡ್‌ನಲ್ಲಿ ತರಭೇತಿ ನೀಡುವುದು, ಇದಲ್ಲದೆ ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಮನೆಗಳ ನಿರ್ಮಾಣ, ಆಶ್ರಯ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ನಿರ್ಮಿಸುವ ಮನೆಗಳಿಗೆ 10,000.00 ರೂ.ಗಳ ಸಹಾಯಧನ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 5 ಲಕ್ಷ ರೂ.ಗಳ ವೆಚ್ಚದಲ್ಲಿ ಮಿನಿ ಅಂಬೇಡ್ಕರ್ ಭವನಗಳ ನಿರ್ಮಾಣ ಹಾಗೂ ಅಂತರ್ ಜಾತಿ ವಿವಾಹಗಳಿಗೆ 25,000 ರೂ.ಗಳ ಪ್ರೋತ್ಸಾಹಧನ ನೀಡುವುದು.

ಅನುಬಂಧ ಅ - 1

ಸಮಾಜ ಕಲ್ಯಾಣ ಇಲಾಖೆಯ ಯೋಜನೆಯಡಿ ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ.

ಯೋಜನಾ ಕಾರ್ಯಕ್ರಮ :

ಕ್ರ.ಸಂ.	ಕಾರ್ಯಕ್ರಮದ ಹೆಸರು
1.	ನಿರ್ದೇಶನ ಮತ್ತು ಆಡಳಿತ
	ಆರ್ಥಿಕಾಭಿವೃದ್ಧಿ
2.	ಡಾ: ಅಂಬೇಡ್ಕರ್ ಶತಮಾನೋತ್ಸವ ಕಾರ್ಯಕ್ರಮವನ್ನೊಳಗೊಂಡಂತೆ ಪರಿಶಿಷ್ಟ ಜಾತಿಯವರಿಗೆ ವಿಶೇಷ ಕಾರ್ಯಕ್ರಮ
3.	ಹೊಲಿಗೆ ಯಂತ್ರಗಳ ಸರಬರಾಜು
4.	ಕಾನೂನು ಪದವೀಧರರಿಗೆ ಸಹಾಯಧನ
	ವಿದ್ಯಾಭ್ಯಾಸ
5.	ಕೇಂದ್ರ ಪುರಸ್ಕೃತ ತರಬೇತಿ ಹಾಗೂ ಸಂಬಂಧಪಟ್ಟ ಯೋಜನೆಗಳು
6.	ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ
7.	ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ರಾಮಕೃಷ್ಣ ಆಶ್ರಮದಂತಹ ವಿದ್ಯಾಸಂಸ್ಥೆಗೆ ಪ್ರವೇಶ ಸೌಲಭ್ಯ
8.	ವಿದ್ಯಾರ್ಥಿನಿಲಯಗಳ ಆರಂಭ ಮತ್ತು ಅಭಿವೃದ್ಧಿ
9.	ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ (ಬೋಜನ ವೆಚ್ಚ)
10.	ನಿವಾಸಿ ಶಾಲೆಗಳ ನಿರ್ವಹಣೆ
11.	ಕಾಲೇಜು ವಿದ್ಯಾರ್ಥಿಗಳಿಗೆ ಸರ್ಕಾರಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವುದು
12.	ಎಂ.ಫಿಲ್, ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಛಾತ್ರ ವೇತನ
13.	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
14.	ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ವಿಶೇಷ ಬೋಧನಾ ವೆಚ್ಚ
15.	ನವಚೇತನ ಕಾರ್ಯಕ್ರಮ
16.	ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ಕೇಂದ್ರ ಪುರಸ್ಕೃತ ಯೋಜನೆ)
17.	ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ರಾಜ್ಯ ಯೋಜನೆ)

18. ನಿವಾಸಿ ಶಾಲೆಗಳ ಕಟ್ಟಡ ನಿರ್ಮಾಣ

19. ನವೋದಯ ಮತ್ತು ಮೊರಾರ್ಜಿ ದೇಸಾಯಿ ಶಾಲೆಗಳ ಕಟ್ಟಡ ನಿರ್ಮಾಣ

20. ಕಟ್ಟಡಗಳ ನಿರ್ವಹಣೆ

21. ಸೇರ್ಪಡೆ ಮತ್ತು ಮಾರ್ಪಾಡುಗಳು

22. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪುರಸ್ಕಾರ ಹಣ

23. ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ ಹಣ

24. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು

25. ಪ್ರತಿಭಾ ವಿದ್ಯಾರ್ಥಿವೇತನ

26. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳಿಗೂ ಮೀರಿದ ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳ ಸಹಾಯ

27. ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (ಕೇಂದ್ರ ಪುರಸ್ಕೃತ ಯೋಜನೆ)

28. ಐಟಿಐ., ಐಟಿಸಿಗಳಲ್ಲಿ ತರಬೇತಿ ಪಡೆಯುವವರಿಗೆ ಸ್ಪೈಫಂಡ್

29. ಅಧ್ಯಯನ ಪ್ರವಾಸ ವೆಚ್ಚಗಳು

30. ಸ್ವಯಂ ಉದ್ಯೋಗ ತರಬೇತಿ (ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿ)

31. ಹೆಣ್ಣು ಮಕ್ಕಳಿಗೆ ಟಿ.ಸಿ.ಹೆಚ್. ತರಬೇತಿ

32. ವಿವಿಧ ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗೆ ವಿದ್ಯಾರ್ಥಿವೇತನ (ಕೇಂದ್ರ ಪುರಸ್ಕೃತ ಯೋಜನೆ)

33. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳ ಸರಬರಾಜು

34. 1 ರಿಂದ 4ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

35. ನವೋದಯ ಮಾದರಿ ನಿವಾಸಿ ಶಾಲೆಗಳು

36. ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ಮಕ್ಕಳಿಗಾಗಿ ಸೈನಿಕ ತರಬೇತಿ ಶಾಲೆ

37. ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳಿಗೆ ಸಹಾಯಾನುದಾನ

38. ವಿದ್ಯಾರ್ಥಿನಿಲಯಗಳ ಬಲವರ್ಧನೆ

39. ಪರಿಶಿಷ್ಟ ವರ್ಗದ ಬಾಲಕಿಯರ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ಕೇಂದ್ರ ಪುರಸ್ಕೃತ ಯೋಜನೆ)

ವಸತಿ

40. ಗೃಹ ನಿರ್ಮಾಣಕ್ಕಾಗಿ ಸಹಾಯಧನ

41. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಮನೆಗಳಿಗೆ ವಿದ್ಯುತ್ ಒದಗಿಸುವುದು.
42. ತಾಂತ್ರಿಕ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು (ಪರಿಶಿಷ್ಟ ವರ್ಗ)
43. ಪರಿಶಿಷ್ಟ ಪಂಗಡದವರಿಗೆ ಗೃಹ ನಿರ್ಮಾಣ
44. ಪರಿಶಿಷ್ಟ ವರ್ಗದವರ ಮನೆಗಳ ಕಟ್ಟಡ ದುರಸ್ತಿ

ಇತರೆ ವೆಚ್ಚಗಳು

45. ವೈದ್ಯಕೀಯ: ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕದ ಭಂಡಾರ (ಕೇಂದ್ರ ಪುರಸ್ಕೃತ ಯೋಜನೆ)
46. ಕೇಂದ್ರ ಪುರಸ್ಕೃತ ಯೋಜನೆಯಡಿ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ
47. ಡಾ: ಬಿ.ಆರ್.ಅಂಬೇಡ್ಕರ್ ಜನ್ಮ ಶತಮಾನೋತ್ಸವದಡಿ ಸಂಶೋಧನಾ ಸಂಸ್ಥೆ
48. ಅಸ್ಪೃಶ್ಯತಾ ನಿವಾರಣೆ (ಕೇಂದ್ರ ಪುರಸ್ಕೃತ ಯೋಜನೆ)
49. ಸೆಮಿನಾರ್‌ಗಳು ಹಾಗೂ ಕಮ್ಮಟಗಳನ್ನು ನಡೆಸುವುದು.
50. ದೌರ್ಜನ್ಯಕ್ಕೊಳಪಟ್ಟ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದವರಿಗೆ ಸಹಾಯ (ಕೇಂದ್ರ ಪುರಸ್ಕೃತ ಯೋಜನೆ)
51. ಡಾ। ಬಿ.ಆರ್. ಅಂಬೇಡ್ಕರ್ ಶತಮಾನೊತ್ಸವ : ಪರಿಶಿಷ್ಟ ಜಾತಿಯವರ ವಿದ್ಯಾರ್ಥಿ ನಿಲಯಗಳಿಗೆ ನಿವೇಶನ ಕಛೇರಿ ಕಟ್ಟಡಗಳು, ಇತರೆ ಕಟ್ಟಡಗಳು ಮತ್ತು ರುದ್ರ ಭೂಮಿಗಾಗಿ ಭೂಸ್ವಾಧೀನ ವೆಚ್ಚ.
52. ಸಮುದಾಯ ಭವನ (ವಿಶೇಷ ಘಟಕ ಯೋಜನೆ)
53. ಎತ್ತುಗಳ ಸರಬರಾಜು (ಗಿರಿಜನ ಉಪ ಯೋಜನೆ)
54. ಪಂಪ್‌ಸೆಟ್‌ಗಳ ಪೂರೈಕೆ (ಗಿರಿಜನ ಉಪಯೋಜನೆ)

ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

55. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ-ಬಂಡವಾಳ ಹೂಡಿಕೆ
56. ಸ್ವಯಂ ಉದ್ಯೋಗ ಯೋಜನೆ
57. ದೇವದಾಸಿಯರ ಪುನರ್ ಯೋಜನೆ
58. ಭೂ ಖರೀದಿ ಯೋಜನೆ
59. ಸಮುದಾಯ ನೀರಾವರಿ ಯೋಜನೆ

ಅನುಬಂಧ - 2

ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ 1999-2000ರ ಸಾಲಿಗೆ ಯೋಜನೇತರ ಕಾರ್ಯಕ್ರಮಗಳು ವಿವರಗಳು

ಯೋಜನೇತರ ಕಾರ್ಯಕ್ರಮಗಳು : ಕಾರ್ಯಕ್ರಮದ ಹೆಸರು

1. ನಿರ್ದೇಶನ ಮತ್ತು ಆಡಳಿತ
2. ಸಂಶೋಧನೆ ಮತ್ತು ಸಾಂಖ್ಯಿಕ ಘಟಕ

ಆರ್ಥಿಕಾಭಿವೃದ್ಧಿ

3. ವ್ಯವಸಾಯ ಕಾಲೋನಿಗಳ ಸುಧಾರಣೆ
4. ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಆಚರಣೆ
5. ನರ್ಸರಿ ಹಾಗೂ ಮಹಿಳಾ ಕಲ್ಯಾಣ ಕೇಂದ್ರಗಳು
6. ಮಹಿಳಾ ತರಭೇತಿ ಕೇಂದ್ರಗಳು

ವಿದ್ಯಾಭ್ಯಾಸ

7. 1984-85ರ ವೆಚ್ಚದ ಮೇಲೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ
8. ರಾಜ್ಯ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ
9. ನಿಮ್ಮ ವರ್ಗದ ವಿದ್ಯಾರ್ಥಿನಿಲಯಗಳು
10. ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿಶೇಷ ತರಭೇತಿ (ಜಿಲ್ಲಾ ಪಂಚಾಯತ್)
11. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು
12. ಪ್ರತಿಭಾ ಪೂರ್ವ ವಿದ್ಯಾರ್ಥಿವೇತನ
13. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
14. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಗಳಿಗೆ ಮೀರಿದ ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳ ಸಹಾಯ
15. ನಿವಾಸಿ ಶಾಲೆಗಳು
16. ಐಟಿಐ:ಐಟಿಸಿ ತರಬೇತಿ ಪಡೆಯುವರಿಗೆ ತರಬೇತಿ
17. ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳು

ವಸತಿ

18. ಕಾನೂನು ನೆರವು

ಅಸ್ಪೃಶ್ಯತಾ ನಿವಾರಣಾ ಯೋಜನೆ

19. ನಾಗರೀಕಾ ಹಕ್ಕು ಸಂರಕ್ಷಣೆ ಯೋಜನೆ
20. ಡಾ. ಬಿ.ಆರ್.ಅಂಬೇಡ್ಕರ್ ಜನ್ಮ ಶತಮಾನೋತ್ಸವದಡಿಯಲ್ಲಿ ಸಂಶೋಧನಾ ಸಂಸ್ಥೆ